





**ಗಂಡ:** ನನ್ನ ಪರ್ಸಿಂದ ಹಿಂದೆಲ್ಲ 200 ಮಾತ್ರ ಹಾರಿಸ್ತಿದ್ದೋಳು ಈಗ ನೋಡಿದ್ರೆ 400 ತೆಗಿತಾ ಇದ್ದಿಯಲ್ವೆ?
**ಹೆಂಡತಿ:** ಹೌದು... ಈಗ ಮೋದಿ ಅವ್ರೇ ಹೇಳಿದ್ದಾರಲ್ವಾ, ಅಬ್ ಕಿ ಬಾರ್ 400 ಪಾರ್ ಅಂತ, ಅದಕ್ಕೆ.

**ಗಂಡ:** ಒಂದು ಸರ್ವೆ ಪ್ರಕಾರ, ಮಾತಾಡುವಾಗ ಗಂಡಸರು ಒಂದು ದಿನದಲ್ಲಿ ಹತ್ತು ಸಾವಿರ ಪದ ಬಳಸಿದ್ರೆ, ಹೆಂಗಸರು ಇಪ್ಪತ್ತು ಸಾವಿರ ಪದ ಬಳಸುತ್ತಾರಂತೆ.
**ಹೆಂಡತಿ:** ಅದಕ್ಕೆಲ್ಲ ನೀವೇ ಕಾರಣ.
**ಗಂಡ:** ಅದು ಹೇಗೆ?
**ಹೆಂಡತಿ:** ಪ್ರತಿಯೊಂದು ಮಾತನ್ನು ಒಮ್ಮೆ ಹೇಳಿದರೆ ನಿಮ್ಮ ಕಿವಿಗೆ ಎಲ್ಲಿ ಬೀಳುತ್ತೆ? ಎರಡೆರಡು ಬಾರಿ ಹೇಳಿದ್ರನೇ ಬೀಳೋದು. ಅದಕ್ಕೆ ಹೆಂಗಸರಿಗೆ ಕನಿಷ್ಠ ಇಪ್ಪತ್ತು ಸಾವಿರ ಪದಗಳು ಬೇಕೇಬೇಕು.

**ಪತ್ನಿ:** ನಾನು ನಿನ್ನ ಕನಸಿನಲ್ಲಿ ಬರ್ತೀನಾ?
**ಗಂಡ:** ಇಲ್ಲ ಕಣೇ. ಮಲಗುವ ಮುಂಚೆ ಹನುಮಾನ್ ಚಾಲೀಸ್ ಹೇಳ್ತೀನಿ. ಹೀಗಾಗಿ ದುಸ್ವಪ್ನಗಳು ನನ್ನನ್ನು ಕಾಡುವುದಿಲ್ಲ.

**ಗುಂಡ:** ನನಗೆ ಐದಾರು ಗರ್ಲ್ ಫ್ರೆಂಡ್ಸ್ ಇದಾರೆ. ತುಂಬಾ ಕುಡಿತೀನಿ, ರಾತ್ರೋ ರಾತ್ರಿ ಪಾರ್ಟಿಗಳಿಗೆಲ್ಲ ಹೋಗ್ತೀನಿ. ರಾತ್ರಿಯಿಡೀ ಎಲ್ಲೆಲ್ಲೋ ಇರ್ತೀನಿ.
**ಹೆಂಡತಿ:** ನಮ್ಮಿಬ್ಬರ ಜಾತಕದಲ್ಲಿ 36 ಗಣಗಳು ಕೂಡಿ ಬಂದಿವೆ ಅಂದಾಗಲೇ ನನಗೆ ಈ ವಿಷಯ ಗೊತ್ತಾಯ್ತು. ಗಣಗಳು ಒಂದೇ ಆದ ಮೇಲೆ ಗುಣಗಳು ಕೂಡ ಒಂದೇ ಥರ ಇರಬೇಕಲ್ವಾ...

**ಗುಂಡ:** ಗುರುಗಳೇ ಎಷ್ಟೇ ಪ್ರಯತ್ನಿಸಿದರೂ ನನ್ನ ಮದುವೆ ಸೆಟ್ ಆಗ್ತಿಲ್ಲ?
**ಜ್ಯೋತಿಷಿ:** ಹೇಗೆ ಆಗುತ್ತಪ್ಪ... ನಿನ್ನ ಜಾತಕದಲ್ಲಿ ಸುಖ, ಸಂತೋಷ, ನೆಮ್ಮದಿ ಇದೆ ಅಂತ ಬರೆದಿದೆ.

**ಪಮ್ಮಿ:** ಮೂಢನಂಬಿಕೆ, ಅಂಧಶ್ರದ್ಧೆ ಅನ್ನೋದೆಲ್ಲ ತಪ್ಪು ಅಂತ ಭಾಷಣ ಮಾಡೋಕೆ ಹೋಗಿದ್ದೋಳು ಇಷ್ಟು ಬೇಗ ಯಾಕೆ ವಾಪಸ್ ಬಂದೆ?
**ನಿಮ್ಮಿ:** ಅಯ್ಯೋ ಬಾಗಿಲು ದಾಟ್ತುತ್ತಿದ್ದ ಹಾಗೇ, ಒಂದು ಬೆಕ್ಕು ಅಡ್ಡ ಬಂತು. ಅದಕ್ಕೆ ವಾಪಸ್ ಬಂದೆ.

**ಹೆಂಡತಿ:** ಗಂಡಸರು ಸದಾ ಬೇರೆಯವರ ಹೆಂಡತಿಯನ್ನು ನೋಡುತ್ತಿರುತ್ತಾರಲ್ಲ ಯಾಕೆ?
**ಗಂಡ:** ಗಂಡಸು ಸದಾ ಬೇರೆಯವರ ತಪ್ಪನ್ನು ನೋಡ್ತಾನೆ ಹೊರತು ಸ್ವಂತದ್ದನ್ನ ನೋಡಲ್ಲ.

**ಹೆಂಡತಿ:** ನನಗೆ ಹೊಸ ಸೀರೆ ಕೊಡಿಸಿ.
**ಗಂಡ:** ಸೀರೆ ಕೊಡಿಸಿ ಇನ್ನೂ ಒಂದು ವಾರನೂ ಆಗಿಲ್ಲ. ಆಗಲೇ ಇನ್ನೊಂದು ಬೇಕಾ?
**ಹೆಂಡತಿ:** ಮೊನ್ನೆ ಫಂಕ್ಷನ್‌ಗೆ ಅದೇ ಸೀರೆ ಉಟ್ಕೊಂಡಿದ್ದೆ. ಅದನ್ನ ನೆಂಟರು, ಫ್ರೆಂಡ್ಸ್, ಅಕ್ಕಪಕ್ಕದ ಮನೆಯವರೆಲ್ಲರೂ ನೋಡಿದ್ದಾರೆ. ಮುಂದಿನ ವಾರದ ಫಂಕ್ಷನ್‌ಗೆ ಅದೇ ಸೀರೆ ಉಡೋಕೆ ಆಗುತ್ತಾ ಹೇಳಿ. ಅದ್ಕೆ ಹೊಸ ಸೀರೆ ಕೊಡ್ಸಿ.
**ಗಂಡ:** ಹೌದಾ... ಹಾಗಾದ್ರೆ, ನಿನ್ನನ್ನೂ ನೆಂಟರು, ನನ್ನ ಫ್ರೆಂಡ್ಸ್, ಮನೆಯ ಅಕ್ಕಪಕ್ಕದವರೆಲ್ಲರೂ ನೋಡಿದ್ವೆ. ಮುಂದಿನ ವಾರದ ಫಂಕ್ಷನ್‌ಗೆ ನಿನ್ನನ್ನೇ ಹೇಗೆ ಕರೆದುಕೊಂಡು ಹೋಗಲಿ. ನನಗೂ ಹೊಸ ಹೆಂಡತಿ ಬೇಕು...

ಸಂಗ್ರಹ: ಶರದ ಕುಲಕರ್ಣಿ, ಬೀದರ್